ನನ್ನ ಕರ್ತವ್ಯ. ಇದನ್ನು ಒಪ್ಪಿಸಿಕೋ' ಎಂದು ಎಲ್ಲರ ಸಮ್ಮುಖದಲ್ಲಿ ಗೌರವಿಸಿದರು. ಗುಬ್ಬಿ ವೀರಣ್ಣನವರಿಂದ ಗೌರವ ಸ್ವೀಕರಿಸುವಾಗ ನರಸಿಂಹಮೂರ್ತಿ ಅವರ ಕಣ್ಣುಗಳು ಸಂಪೂರ್ಣವಾಗಿ ನೀರಿನಿಂದ ತೋಯ್ದುಹೋಗಿದ್ದವು. ಐವತ್ತರ ದಶಕದಲ್ಲಿ ಇದು ಅತ್ಯಂತ ದುಬಾರಿ ಉಡುಗೊರೆಯೆ! ಕೇಳಿದರೆ, ಮತ್ತೂ ಕೇಳಬೇಕೆನಿಸುವ ಈ ಘಟನೆಯನ್ನು ನೋಡಿದವರು ಈಗಲೂ ಇದ್ದಾರೆ.

'ಪ್ರಾಮಾಣಿಕತೆ ಮತ್ತು ನೈತಿಕತೆ'ಯ ಗುಣಗಳನ್ನು ತಮ್ಮ ತಂದೆಯಿಂದ ಬಳುವಳಿಯಾಗಿ ಪಡೆದಿದ್ದ ನರಸಿಂಹಮೂರ್ತಿ ಅವರು ಐವತ್ತರ ದಶಕದಲ್ಲಿ ಗುಬ್ಬಿಯಲ್ಲಿದ್ದ ಅಮಲ್ದಾರ್ ಒಬ್ಬರಿಗೆ ಕ್ಷೌರ ಮಾಡಲು ಅವರ ಮನೆಗೇ ಹೋಗುತ್ತಿದ್ದರು. ಇವರ ಪ್ರಾಮಾಣಿಕತೆ ಮತ್ತು ಕೌಟುಂಬಿಕ ಸ್ಥಿತಿಯನ್ನು ಹತ್ತಿರದಿಂದ ಕಂಡು, ಕೇಳಿ ತಿಳಿದಿದ್ದ ಅಮಲ್ದಾರ್ ಸಾಹೇಬರು, 'ನರಸಿಂಹಮೂರ್ತಿ, ನೀನು ಇಷ್ಟು ದೊಡ್ಡ ಕಲಾವಿದನಾದರೂ ಬಡತನದಲ್ಲೇ ಇದ್ದೀಯಾ! ನನ್ನ ಅಧಿಕಾರ ಬಳಸಿ ನಿನ್ನ ಕುಟುಂಬಕ್ಕೆ ಗುಬ್ಬಿಗೆ ಸಮೀಪದಲ್ಲಿ ಐದು ಎಕರೆ ಜಮೀನನ್ನು ಮಂಜೂರು ಮಾಡಿಕೊಡುತ್ತೇನೆ. ಆ ಜಮೀನಿನಲ್ಲಿ ಬೇಸಾಯ ಮಾಡಿಕೋ' ಎಂದು ಹೇಳಿದರು. ತಮ್ಮ ತಂದೆಯಂತೆಯೇ ಆಸೆ ಕಪಟಗಳಿಲ್ಲದ ನರಸಿಂಹಮೂರ್ತಿ ಅವರು ಅದಕ್ಕೊಪ್ಪದೆ, 'ಈ ಭೂಮಿ, ಈ ಬೇಸಾಯವೆಲ್ಲ ನಮ್ಮಂತಹವರಿಗೆ ಅಲ್ಲ ಸ್ವಾಮಿ, ಬೇಡ. ಹೇಗೋ ಕ್ಷೌರ ಮಾಡಿಯೇ ಜೀವನಯಾಪನೆ ಮಾಡುತ್ತಿದ್ದೇವೆ. ಇಷ್ಟೇ ಸಾಕು ನಮಗೆ' ಎಂದು ಕೈಮುಗಿದು ಹೇಳಿ ಹೊರಬಂದರು. ಜೊತೆಯಲ್ಲಿಯೇ ಇದ್ದ ಅವರ ಕಿರಿಯ ಸಹೋದರ ಶ್ರೀನಿವಾಸಯ್ಯ, 'ಯಾಕಣ್ಣಯ್ಯಾ, ಅಮಲ್ದಾರ್ರು ದೊಡ್ಡಮನಸ್ಸು ಮಾಡಿ ಭೂಮಿ ಕೊಡ್ತೀನಿ ಅಂದ್ರೆ ಬ್ಯಾಡ ಅಂತೀಯಾ!' ಎಂದು ಕೇಳಿದಕ್ಕೆ, ನರಸಿಂಹಮೂರ್ತಿ, 'ನಮ್ಮದಲ್ಲದ್ದಕ್ಕೆ ಆಸೆ ಪಡಬಾರದುಕಣೋ ಸೀನಪ್ಪ. ನಮ್ಮ ಕೈನಲ್ಲಿ ಕಸುಬಿದೆ, ಜೊತೆಗೆ ಸಂಗೀತ ದೇವತೆ ಕೊಟ್ಟ ನಾಗಸ್ವರ ಇದೆ. ಬದುಕೋದಕ್ಕೆ ಇದಿಷ್ಟೇ ಸಾಕು ನಮಗೆ. ನೀನಾದರೂ ಚೆನ್ನಾಗಿ ಓದು. ಇದೆಲ್ಲಾ ನಮಗಿರಲಿ' ಎಂದು ಹೇಳಿದರು. ಈ ಎಲ್ಲ ಸಂಕಟಗಳ ಬದುಕಿನ ನಡುವೆಯೂ ಸಂಗೀತದ ಉನ್ನತ ಹಂಬಲದ ಹಣತೆಯ ದೈವಿಕ ಬೆಳಕು ಅವರೊಳಗೆ ಸದಾ ಉರಿಯುತ್ತಿತ್ತು.

ಸತ್ಯ ಮಾರ್ಗದಲ್ಲಿ ನಡೆಯುವ ಇಂತಹ ಹಿರಿಯ ಜೀವಿಗಳ ನೆರಳಿನಲ್ಲಿ ಹೊಸಪಾಳ್ಯದ ಕೇರಿ ಸೌಹಾರ್ದ ಬದುಕಿನ ಇತಿಹಾಸದ ಸಂಸ್ಕೃತಿಯನ್ನು ಹೆಚ್ಚು ವಾಸ್ತವಗೊಳಿಸಿತ್ತು. ನಮ್ಮ ಕಣ್ಣ ಮುಂದೆಯೇ ಬಾಳಿ ಬದುಕಿದ ಇಂತಹ ಸುಂದರ ಬದುಕಿನ ಚಿತ್ರಗಳು ಈಗ ನಮ್ಮನ್ನು ಕಾಡುವುದು ಸಹಜವೇ ಆಗಿದೆ.

ಕೆಂಪಮ್ಮಜ್ಜಿ, ಹನುಮೇಗೌಡರು, ಬೆಳ್ಳಾವೆಪ್ಪ, ಮುಕುಂದಪ್ಪ, ನರಸಿಂಹಮೂರ್ತಿ... ಇವರೆಲ್ಲರೂ ಗಾಂಧಿ ಹೇಳಿದಂತೆ 'ದೇವರ ಅಂಶಗಳು'. ಇಂತಹವರು ಇರುವ ಯಾವುದೇ ಸಮಾಜದಲ್ಲಿ ಮಾನವತೆಯ ದೀಪ ಎಂದೂ ನಂದುವುದಿಲ್ಲ.

### ಜಿ.ವಿ. ಆನಂದಮೂರ್ತಿ

ಲೇಖಕರು ತುಮಕೂರಿನ ತಿಗಳರ ಗೊಲ್ಲಹಳ್ಳಿ, ಬೆಳ್ಳಾವಿ ಮಜರೆ ಗ್ರಾಮದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿ, ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ ಪಡೆದಿದ್ದಾರೆ. 'ಪ್ರಜಾವಾಣಿ' ಕಥಾಸ್ಪರ್ಧೆಯಲ್ಲಿ ಬಹುಮಾನ ಬಂದಿದೆ. 'ಪ್ರಜಾವಾಣಿ' ಮತ್ತು 'ಮಯೂರ' ಪತ್ರಿಕೆಗಳಲ್ಲಿ ಕತೆ ಮತ್ತು ಪ್ರಬಂಧಗಳು ಪ್ರಕಟಗೊಂಡಿವೆ. ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕ. 'ನೀರಗಂಧ', 'ಜಾಲಾರ ಹೂವು ಮತ್ತು ಇತರ ಪ್ರಬಂಧಗಳು', 'ಹೊಳೆ ಸಾಲು', 'ಹರಿವ ಹೊಳೆ' ಅವರ ಕೆಲವು ಪುಸ್ತಕಗಳು.